# ಸಂಸ್ಕೃತಿಯ ಅಳಿವು-ಉಳಿವು

• ಡಾ. ಬಿ.ವಿ. ವಸಂತ ಕುಮಾರ್

ಜಾಗತೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಇಂದಿನ ಪಾಶ್ಚಾತ್ಯೀಕರಣದ ಸಂದರ್ಭದಲ್ಲಿ ಮೂರನೇ ಜಗತ್ತಿನ ರಾಷ್ಟ್ರಗಳ ಒಂದು ತೀವ್ರವಾದ ಆತಂಕವೆಂದರೆ ತಮ್ಮ ಹುಟ್ಟುನೆಲದ ಸಂಸ್ಕೃತಿಯ ಮೇಲೆ ನಡೆಯುತ್ತಿರುವ ಸುವ್ಯವಸ್ಥಿತವಾದ ಆಕ್ರಮಣ. ತಾನು ಸಾಧಿಸಿರುವ ನಾಗರೀಕತೆಯ ಬಗ್ಗೆ ಕೊಚ್ಚಿಕೊಳ್ಳುವ ಮನುಷ್ಯ ತನ್ನ ಈ ಆಕ್ರಮಣಕಾರಿ ಮನೋಭಾವವನ್ನು ನಿಯಂತ್ರಣದಲ್ಲಿಡುವ, ಸುಧಾರಿಸಿಕೊಳ್ಳುವ ಪ್ರಯತ್ನದ ಬಗ್ಗೆ ಚಿಂತಿಸದಿರುವುದು ನಿಜವಾಗಿಯೂ ಶೋಚನೀಯ. ಆಕ್ರಮಣವೆಂಬುದು ಭಯಗ್ರಸ್ತ ಮನಸ್ಸಿನ ಮೊದಲ ಅಸ್ತ್ರ. ಹಿಂದೆ ವ್ಯಕ್ತಿ ಕಾಡಿನಲ್ಲಿ ವಾಸಿಸುತ್ತಲೇ ಅಲ್ಲಿನ ರುದ್ರಭಯಂಕರತೆಯ ಪರಿಣಾಮವಾಗಿ ಮರಗಿಡಗಳ ಮೇಲೆ, ಪ್ರಾಣಿಗಳ ಮೇಲೆ, ಆಕ್ರಮಣ ಮಾಡಿದ್ದಾನೆ. ತನ್ನ ಬೌದ್ಧಿಕ ಸಾಮರ್ಥ್ಯದಿಂದ ಗೆದ್ದು ತನ್ನ ಅಧಿಕಾರವನ್ನು ಸ್ಥಾಪಿಸಿದ್ದಾನೆ. ಅದೇ ಹೆದ್ದಾರಿಯಲ್ಲಿ ಇಂದು ಮಂಗಳಲೋಕದ ಮೇಲೆ ತನ್ನ ಕುರುಹುಗಳನ್ನು ಸ್ಥಾಪಿಸುವ ಹಂತಕ್ಕೇರಿದ್ದಾನೆ. ಇದು ಮನುಷ್ಯನ ಸಾಧನೆಯ ತುತ್ತತುದಿ ಎಂದೆನಿಸಿದರೂ ಅವನು ತನ್ನೊಳಗಿನ ಮನಸ್ಸಿನ ಮೇಲೆ ಹತೋಟಿ ಸಾಧಿಸಲಾಗಿಲ್ಲವೆಂಬುದು ಅವನ ಎಲ್ಲ ಸಿದ್ಧಿಗಳನ್ನು ಬುಡಮೇಲು ಮಾಡಿಬಿಡುತ್ತದೆ. ಬಹಿರಂಗವು ಅಧಿಕಾರ ಕೇಂದ್ರಕ್ಕೆಳೆದರೆ, ಅಂತರಂಗವು ಅನುಭಾವ ಕೇಂದ್ರಿತವಾಗುತ್ತದೆ. ಹಾಗಾಗಿಯೆ ಬಸವಣ್ಣ ಅಂತರಂಗ ಶುದ್ಧಿಯೇ ಬಹಿರಂಗ ಶುದ್ಧಿ ಎಂದಿದ್ದಾರೆ. ಇಂಟರನಲ್ ನೆಟ್‌ವರ್ಕ್ ಚೆನ್ನಾಗಿದ್ದರೆ ಮಾತ್ರ ಇಂಟರ್‌ನೆಟ್ ಚೆನ್ನಾಗಿರುತ್ತದೆ ಎಂಬುದು ಅಂತಿಮ ಸತ್ಯ. ಆ ಇಂಟರ್‌ನಲ್ ನೆಟ್‌ವರ್ಕನ್ನು ತಿದ್ದಿ ತೀಡಿ ಸುಂದರಗೊಳಿಸುವುದೇ ಸಂಸ್ಕೃತಿ.

ಹೂವಿಗೆ ಬೆಲೆ ಅದರ ಸುಗಂಧದಿಂದ, ಹಣ್ಣಿಗೆ ಬೆಲೆ ಅದರ ರಸದ ರುಚಿಯಿಂದ, ಹಾಗೆಯೇ ಒಂದು ನಾಗರಿಕತೆಗೆ ಬೆಲೆ ಬರುವದು ಅದರ ಸಂಸ್ಕೃತಿಯ ಸಾರದಿಂದ! ನಾಗರಿಕತೆಯೆಂಬುದು ಹೂವಾದರೆ ಸಂಸ್ಕೃತಿ ಎಂಬುದು ಅದರ ಬೇರು ಹಾಗೂ ಪರಿಮಳ ಎರಡೂ ಆಗಿರುತ್ತದೆ. ಸಂಸ್ಕೃತಿಯ ಒಲವಿನ ಬಲವಿಲ್ಲದ ನಾಗರಿಕತೆ ಎಷ್ಟೇ ಆರ್ಥಿಕವಾಗಿ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಸಮೃದ್ಧವಾಗಿದ್ದರೂ ಅದು ಹೃದಯವಿಲ್ಲದ ಮನುಷ್ಯರಂತಾಗುತ್ತದೆ ಅಥವಾ ಮನುಷ್ಯರುಗಳಿಲ್ಲದ ರೋಬೋಟ್—ಯಾಂತ್ರಿಕ ಮಾನವನ —ನಾಡಾಗುತ್ತದೆ. ಆಕ್ರಮಣಗಳಿಂದ ನಾಗರಿಕತೆ ಹುಟ್ಟಿದರೆ ಅನುಸಂಧಾನದಿಂದ ಸಂಸ್ಕೃತಿ ರೂಪುಗೊಳ್ಳುತ್ತದೆ, ವಿಕಾಸವಾಗುತ್ತದೆ, ಚಲನಶೀಲವಾಗಿರುತ್ತದೆ. ಅದೇ ಮುಂದೆ ಪರಂಪರೆ ಎಂಬ ಅಮೃತಫಲವಾಗುತ್ತದೆ. ಅನುಸಂಧಾನಕ್ಕೆ ಸತ್ಯಶೋಧನೆಯ ಪ್ರೀತಿ ಎಂಬ ಸಾಧನ ಬೇಕು. ಆಕ್ರಮಣಕ್ಕೆ ಆಯುಧಗಳು ಬೇಕು. ಆದರೆ ಭಸ್ಮಾಸುರನಂತೆ ಬೆಳೆಯುತ್ತಿರುವ ಗಂಧವಿಲ್ಲದ ಜಾಗತೀಕರಣದ ವ್ಯಾಪಾರೀ ಲಾಭಕೋರ ಮನಸ್ಸು ಸಂಸ್ಕೃತಿಯನ್ನೂ ತನ್ನ ಆಕ್ರಮಣದ ಒಂದು ಆಯುಧವನ್ನಾಗಿ ಬಳಸಲಾರಂಭಿಸಿರುವುದು ಈ ಶತಮಾನದ ಅತ್ಯಂತ ಭೀಕರ ಅಪಾಯದ ಮುನ್ಸೂಚನೆ. ಬುದ್ಧಿ ನಾಗರಿಕತೆಯ ಸಾಮ್ರಾಟನಾದರೆ, ಭಾವ ಸಂಸ್ಕೃತಿಯ ಸ್ವಯಂಸೇವಕ.

ಸ್ವಯಂಸೇವೆಯ ಅರಿವಿಲ್ಲದ ಮನುಷ್ಯನು ನಿಸರ್ಗವೆಂಬುದು ತನ್ನ ಸೇವಕನಾಗಬೇಕೆಂದು ಹಂಬಲಿಸಿ ನಿಸರ್ಗದ ಮೇಲೆ ದಾಳಿ ಮಾಡುತ್ತ ನಾಗರಿಕತೆಯ ಹೆಸರಿನಿಂದ ನಾಗಾಲೋಟದಲ್ಲಿ ಮಣ್ಣಿನಿಂದ ದೂರವಾಗುತ್ತಾನೆ. ಮಣ್ಣಿನಿಂದ ದೂರವಾಗುವುದೆಂದರೆ ಮನುಷ್ಯತ್ವದಿಂದ ದೂರವಾದಂತೆಯೇ. ಮಣ್ಣು ಕೇವಲ ಮಣ್ಣಲ್ಲ, ಅದು ಜೀವನದ ಕಣ್ಣು. ಕುವೆಂಪು ಅವರ ಮಕ್ಕಳ ನಾಟಕವೊಂದರಲ್ಲಿ ಮಣ್ಣಲ್ಲಿ ಆಟವಾಡುತ್ತಿದ್ದ ಮಗುವಿಗೆ ಅದರ ತಾಯಿ ದುಡ್ಡು ಕೊಡುವೆ ಬಾ ಎಂದು ಕರೆದಾಗ ಆ ಮಗು "ಅಮ್ಮಾ, ಮಣ್ಣಿನಷ್ಟು ನುಣ್ಣಗಿಹುದೆ ನಿನ್ನ ದುಡ್ಡು, ಗಾಳಿಯಲ್ಲಿ ಹಾರಬಲ್ಲುದೆ, ನೀರಿನಲ್ಲಿ ತೇಲಬಲ್ಲುದೆ?" ಎಂದು ಪ್ರಶ್ನಿಸುತ್ತದೆ. ಇದೇ ಆ ಮಗು ನಿಸರ್ಗದೊಡನೆ ನಡೆಸುವ ಅನುಸಂಧಾನದ ರೀತಿ. ನಮ್ಮ ಇಡೀ ಜನಪದ ಜಗತ್ತಿಗೆ ನಿಸರ್ಗವೇ ತಾಯಿ, ತಂದೆ, ಬಂಧು, ಬಳಗ, ಗೆಳೆಯ, ಗೆಳತಿ, ಗುರು ಎಲ್ಲವೂ ಆಗಿದೆ. ಅವರ ದೇವರು ಹೂವಿನಾಗೆ ಹುದುಗಿದ್ದಾನೆ, ಮಾಲೆಯಲ್ಲಿ ಮಲಗಿದ್ದಾನೆ, ಮೊಗ್ಗಿನಲ್ಲಿ ಕಣ್ಣ ತೆರೆಯುತ್ತಾನೆ. ಹೂವಿನ ಅರಳುವಿಕೆಯಲ್ಲಿ ದೇವರ ಇರುವಿಕೆಯನ್ನು ಕಾಣುವ ಅರಿವು ಸಂಸ್ಕೃತಿಯನ್ನು ಹೆರುತ್ತದೆ. ಹೀಗೆ ಮನುಷ್ಯ ನಿಸರ್ಗದೊಡನೆ ಅನುಸಂಧಾನ ನಡೆಸಿದಾಗ ಅದನ್ನು ಗುಲಾಮಿಯನ್ನಾಗಿಸದೆ ತನ್ನ ಗುರುವಾಗಿಸಿಕೊಳ್ಳುತ್ತಾನೆ, ದೇವರಾಗಿಸಿಕೊಳ್ಳುತ್ತಾನೆ. ಈ ಗುರುವಿನಿಂದ ದೊರೆತ ಅರಿವು ಸಂಸ್ಕೃತಿಗೆ ದಾರಿ ಮಾಡಿಕೊಡುತ್ತದೆ.

ಸಂಸ್ಕೃತಿ ಎಂಬುದು ಇಂಗ್ಲಿಷಿನ ಕಲ್ಚರ್ ಎಂಬುದಕ್ಕೆ ಸಂವಾದಿಯಾದ ಶಬ್ದ. ಕಲ್ಚರ್ ಎಂಬುದು ಕಲ್ಚುರಾ—ಉಳುವುದು ಎಂಬುದರಿಂದ ಬಂದಿದೆ. ಅಗ್ರಿಕಲ್ಚರ್ ಎಂದರೆ ಒರಟು ಒರಟಾದ ನೆಲವನ್ನು ಉತ್ತು ಬಿತ್ತಿ ಬೆಳೆ ಪಡೆಯುವ ವಿಧಾನ. ಅಂತೆಯೇ ಕಲ್ಚರ್

ಪ್ರಸಕ್ತ ಜಾಗತಿಕ ಸನ್ನಿವೇಶದಲ್ಲಿ ಪಾಶ್ಚಾತ್ಯೀಕರಣದಿಂದ ನಡೆಯುತ್ತಿರುವ ಸಾಂಸ್ಕೃತಿಕ ಆಕ್ರಮಣದ ಸಂದರ್ಭದಲ್ಲಿ ಸಂಸ್ಕೃತಿಯ ಕುರಿತು ತಮ್ಮ ವಿಚಾರಗಳನ್ನು ತಿಳಿಸಿರುವ ಡಾ. ಬಿ.ವಿ. ವಸಂತ ಕುಮಾರ್ ಅವರು ಕಡೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ.

ಎಂಬುದು 'ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ ಭ್ರಾಂತಿಯ ಬೇರ ಕಳೆದು ಬೆಳಕ ಪಡೆಯುವ' ಜೀವನ ಪದ್ಧತಿ. ಸಂಸ್ಕೃತಿ ಎಂಬುದು ಸಂಸ್ಕಾರಗಳ ಫಲ. ಹಿಟ್ಟಿನ ಗಿರಣಿಯಲ್ಲಿ ಕಾಳು ಹಿಟ್ಟಾಗಿ ಹೊಟ್ಟೆಗೆ ಸೇರಿದರೆ, ಬೀಜ ಸಂಸ್ಕರಣ ಘಟಕ ದಲ್ಲಿ ಸಂಸ್ಕಾರಕ್ಕೊಳಗಾದ ಕಾಳು ಬೀಜವಾಗಿ ಭೂಮಿಯ ಗರ್ಭ ದಲ್ಲಿ ಮರುಹುಟ್ಟು ಪಡೆದು ಮುಂದಿನ ತಲೆಮಾರಿನ ಬದುಕನ್ನು ಬೆಳೆಸುತ್ತದೆ. ಅಂತೆಯೇ ಮನುಷ್ಯನಿಗೆ ದೊರಕುವ ಸಂಸ್ಕಾರಗಳ ಫಲ ಸಂಸ್ಕೃತಿ.

ಸಂಸ್ಕೃತಿಯ ಕೈಯಲ್ಲಿ ಸ್ಫೂರ್ತಿ ಕಲೆಯಾದರೆ, ಇಂದಿನ ಸ್ಪರ್ಧಾ ರಣರಂಗದಲ್ಲಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಕೈಯಲ್ಲಿ ಸಂಸ್ಕೃತಿಯೂ ಆಕ್ರಮಣದ ಒಂದು ಆಯುಧವಾಗಿ ಬಳಕೆ ಯಾಗುತ್ತಿರುವುದು 'ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ ಧರೆ ಹೊತ್ತಿ ಉರಿದೊಡೆ ನಿಲಬಹುದೆ?' ಎಂದೆನಿಸುತ್ತದೆ.

ಸಂಸ್ಕೃತಿ ಎಂಬುದು ಆಯಾ ನೆಲದ ಜನಾಂಗದ ಜೀವನಾನು ಭವದ, ದರ್ಶನದ, ಪರಂಪರೆಯ ಫಲ. ಸಾಂಸ್ಕೃತಿಕ ಆಕ್ರಮಣ ವೆಂದರೆ ಬೇರು ಕೊರೆಯುವ ಕ್ರಿಯೆ. ನಿಂತ ನೆಲದಲ್ಲಿಯೇ ಮರವನ್ನೊಣಗಿಸಿ ಬುಡಮೇಲು ಮಾಡುವ ಸಂಚು. ಇದರಿಂದಾಗಿ ಹಿಂದಿನ ನಮ್ಮ ಗಡಿಗಳು ನಾಶವಾಗುತ್ತಿವೆ, ಭಾಷೆ ನಾಶವಾಗು ತ್ತಿದೆ. ವಿದ್ಯಾಭ್ಯಾಸವನ್ನು ಪಡೆದಿದ್ದರೂ ಉದ್ಯೋಗ ದೊರಕುತ್ತಿಲ್ಲ. ಬದುಕು ಭಾರವಾಗುತ್ತಿದೆ ಎಂದು ಕೂಗುತ್ತಿದ್ದ ಜಾಗದಲ್ಲಿ ಇಂದು ರೈತ ಅನಿವಾರ್ಯವಾಗಿ ತನ್ನ ಹೊಲದಲ್ಲೆ, ಕಾರ್ಮಿಕ ತನ್ನ ಕಾರ್ಖಾನೆಯಲ್ಲೇ, ವಿದ್ಯಾರ್ಥಿ ತನ್ನ ಶಾಲಾ ಕಾಲೇಜಿನಲ್ಲೇ, ನೌಕರ ತನ್ನ ಕಛೇರಿಯಲ್ಲೇ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ತಮ್ಮದೇ ನೆಲದಲ್ಲಿ ನಮ್ಮ ಮಕ್ಕಳು ನಮ್ಮ ಸಂಸ್ಕೃತಿಯಿಂದ ದೂರವಾಗಿ ಕಳೆದುಹೋಗುತ್ತಿದ್ದಾರೆ ಎಂದು ಕೂಗಬೇಕಾಗಿದೆ, ಕೊರಗಬೇಕಾಗಿದೆ.

ಒಂದು ಸಂಸ್ಕೃತಿ ಉಳಿದಾಗ ಮಾತ್ರ ಆ ನಾಡು, ಜನಾಂಗ, ಭಾಷೆ, ಸಾಹಿತ್ಯ ತನ್ನತನವನ್ನು ಉಳಿಸಿಕೊಂಡು ಬೆಳೆಯುವುದಕ್ಕೆ ಸಾಧ್ಯ. ಇಲ್ಲದಿದ್ದಲ್ಲಿ ಅದೊಂದು ಜೋಳದ ಹೊಲಕ್ಕೆ ಕಟ್ಟಿದ ಬೆದರು ಬೊಂಬೆಯಂತೆ ಸತ್ವಹೀನ ಆದೀತು ಅಷ್ಟೆ. ಸಂಸ್ಕೃತಿ ಉಳಿಯಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಮೊದಲು ತನ್ನಲ್ಲಿ, ತನ್ನ ಕುಟುಂಬದಲ್ಲಿ ರೂಢಿಸಿಕೊಂಡು, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅದರ ಬಗ್ಗೆ ಅರಿವು ಹಾಗೂ ಜಾಗೃತಿ ಮೂಡಿಸುವಲ್ಲಿ ಪ್ರಯತ್ನಿಸಬೇಕು. ಎಲ್ಲರೂ ಸಕ್ರಿಯವಾಗಿ ಭಾಗಿ ಗಳಾದಾಗ ಮಾತ್ರ ಇದೊಂದು ವ್ಯಾಪಕ ಚಳುವಳಿಯಾಗಿ ಬೆಳೆದು ನಮ್ಮ ವೈಯಕ್ತಿಕತೆಯನ್ನು ಉಳಿಸಿಕೊಂಡು ನಾವು ಸಮೃದ್ಧ ರಾಷ್ಟ್ರ ವೊಂದನ್ನು ಕಟ್ಟಬಹುದು.

## ಸಂಸ್ಕೃತಿಯ ಬಗ್ಗೆ ಈ ಮಹನೀಯರು ಏನು ಹೇಳುತ್ತಾರೆ ?

**ಸಂ**ಸ್ಕೃತಿ ಎಂದರೆ, ಅದು ಸಾರ್ಥಕ ಬದುಕಿನ ಚಿಹ್ನೆ. ಇದು ಹೆಚ್ಚಿದಂತೆ ಮನುಷ್ಯನ ಜೀವನವೂ ಸೌಂದರ್ಯಪೂರ್ಣವಾಗುತ್ತದೆ. ಕಲಾಪೂರ್ಣವಾಗುತ್ತದೆ, ವಿಕಾಸಗೊಳ್ಳುತ್ತದೆ ... ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು, ಸ್ವಗುಣ ಪರಗುಣಗಳ ಸಂಮಿಶ್ರಿತ ಕಾಂತಿ. ಮೂಲತಃ ಈ ಸಂಸ್ಕೃತಿ ನಮ್ಮ ಅಂತರಂಗ ಜೀವನಕ್ಕೆ ಸಂಬಂಧಪಟ್ಟದ್ದು. ಅದು ನಮ್ಮ ಒಳಸಂಪತ್ತು. ಅದರ ಜಾಗ ಮನಸ್ಸು ಮತ್ತು ಹೃದಯ. ...ಮನುಷ್ಯಸಂಸ್ಕೃತಿಯ ಅತ್ಯಂತ ಬೆಲೆಯುಳ್ಳ ಅಂಶ 'ವ್ಯಕ್ತಿಗುಣ'. ಆ ವ್ಯಕ್ತಿಸಂಸ್ಕೃತಿಯ ಅಭಿವೃದ್ಧಿಯಾದಷ್ಟೂ ಜನಸಂಖ್ಯೆಗೆ ಸೌಖ್ಯಾಭಿವೃದ್ಧಿ. ಸಂಸ್ಕೃತಿ ಬಾಳನ್ನೂ ಹದಗೊಳಿಸುತ್ತದೆ. ನಾವು ಎಂತಹ ನಯವಿನಯ ನಾಜೂಕುಗಳಿಂದ ಬಾಳ್ವೆಯನ್ನು ನಡೆಸಿದರೆ, ಅದರಲ್ಲಿ ಹುಳಿ ಕಹಿಗಳು ಕಡಿಮೆಯಾಗಿ ಸ್ವಾರಸ್ಯವು ಹೆಚ್ಚೀತೋ ಆ ತೆರದ ಮನೋಭಾವಗಳನ್ನು ನಡೆನುಡಿಗಳನ್ನು ಸಂಪಾದಿಸಿಕೊಳ್ಳುವುದೇ ಸಂಸ್ಕೃತಿ. ಅದೊಂದು ಬಗೆಯ ಆತ್ಮಶಿಕ್ಷಣವೂ ಹೌದು!

—ಡಿ.ವಿ.ಜಿ. (ಹೊಸಗನ್ನಡ ಪ್ರಬಂಧ ಸಂಕಲನ. ಸಂ: ಗೊರೂರು)

**ಒಂ**ದು ರಾಷ್ಟ್ರದ, ಒಂದು ಜನಾಂಗದ ಸಂಸ್ಕೃತಿಯು ಆ ದೇಶದ, ಆ ಜನಪದದ ಹೃದಯ ಹಾಗೂ ಆತ್ಮಗಳಲ್ಲಿ ಇರುತ್ತದೆ. ಮನುಷ್ಯನ ಮನಸ್ಸು ಏನನ್ನೇ ಹೇಳಲಿ ಸಂಸ್ಕೃತಿಯು ಅವನ ಅಂತರಾತ್ಮಕ್ಕೆ ವಿಧೇಯವಾಗಿ ಇರಬೇಕು. ಸಂಸ್ಕೃತಿಯು ಮನುಷ್ಯನ ಸಂಪೂರ್ಣ ಬೆಳವಣಿಗೆಯಲ್ಲೇ ಇದೆ.

—ಪಾಟೀಲ ಪುಟ್ಟಪ್ಪ (ಬದುಕುವ ಮಾತು, ಭಾಗ-2 ಪು.31)

**ಸಂ**ಸ್ಕೃತಿ ಎಂದರೆ, ಚೆನ್ನಾಗಿ ಮಾಡಿದ್ದು (ಸಮ್ಯಕ್ ಕೃತಿ) ಎಂದರ್ಥ. ಅದು ಅಮೂರ್ತ ವ್ಯಾಪಾರವಲ್ಲ; ವ್ಯಕ್ತಿಯ ಪ್ರತಿಯೊಂದು ನುಡಿ, ನಡೆಯಲ್ಲೂ ವ್ಯಕ್ತವಾಗಬೇಕಾದ ಮೂರ್ತ ವಿದ್ಯಮಾನ; ಅದೊಂದು ಕೃತಿ (act), ಪರಿಪೂರ್ಣ ಕೃತಿ. ಅದರಲ್ಲಿ ಸವಿ, ಬೆಳಕು, ಪ್ರಿಯ, ಹಿತ ಎಲ್ಲವೂ ಮೇಳೈಸಿರಬೇಕು. ಅದು ವ್ಯಷ್ಟಿ ಸಮಷ್ಟಿಗಳ ಶ್ರೇಯೋಭ್ಯುದಯಗಳಿಗೆ ಕಾರಣವಾಗಬೇಕು, ಸರ್ವೋದಯ ಸಾಧಕವಾಗಬೇಕು.

—ಸಿ.ಪಿ.ಕೆ. (ದೀಪಸ್ಮಿತ, ಪು.90)

**ನಿ**ಜವಾದ ಸಂಸ್ಕೃತಿ ಬರಬೇಕಾದರೆ ಜೀವನದ ಕಷ್ಟನಿಷ್ಠುರಗಳನ್ನು ಪರಿಪಕ್ವವಾದ ಮನಸ್ಸಿನಿಂದ ಪರಿಶೀಲಿಸಲು ಕಲಿತಾಗ... ನಿಜವಾದ ಸಂಸ್ಕೃತಿ ಬರಬೇಕಾದರೆ ಜೀವನವನ್ನು ಮರೆಯುವುದರಿಂದಲ್ಲ; ಅದನ್ನು ದಿಟ್ಟಿಸಿ ನೋಡುವ ಸ್ಥೈರ್ಯವನ್ನು ಪಡೆಯುವುದರಿಂದ; ಜೀವನದ ಶುಭಾಶಯಗಳೆಲ್ಲವನ್ನೂ ಮನಸ್ಸಿನಲ್ಲಿ ಒಂದು ವ್ಯವಸ್ಥೆಗೆ ಒಳಪಡಿಸಿ, ಒಂದರಿಂದ ಹಿಗ್ಗದೆ ಮತ್ತೊಂದರಿಂದ ಕುಗ್ಗದೆ ಸಮರಸದ ಜೀವನವನ್ನು ನಡೆಸುವುದರಿಂದ.

—ಎ.ಎನ್. ಮೂರ್ತಿರಾವ್ (ಮಿನುಗು ಮಿಂಚು, ಪು.96)